

# ಬಿಳಿ ಎಲೆಯ ಬೆಳ್ಳಟ್ಟೆ

ಹಚ್ಚಹಸುರಿನ ಮರಗಳ ಮಧ್ಯೆ ಬಿಳಿಯ ಎಲೆಗಳಿಂದ ಶೃಂಗರಿಸಲ್ಪಟ್ಟ ಹಾಗೆ ಕಾಣುವ ಪ್ರಕೃತಿಯ ಸುಂದರ ದೃಶ್ಯವಿದು. ಮಳೆಗಾಲದಲ್ಲಿ ಮರಗಳೆಲ್ಲಾ ಚಿಗುರಿ ಹೂ ಬಿಡುವ ಸಮಯದಲ್ಲಿ ಇದರ ಎಲೆ ಬಿಳಿ ಬಣ್ಣದಲ್ಲೇ ಚಿಗುರುತ್ತದೆ. ನಂತರ ಹಳದಿ ಬಣ್ಣದ ಹೂ ಬಿಡುತ್ತದೆ. ಮಲೆನಾಡಲ್ಲಿ ಇದನ್ನು 'ಬೆಳ್ಳಟ್ಟೆ' ಗಿಡ ಎಂದು ಕರೆಯುತ್ತೇವೆ. **Mussenda Frondosa** ಇದರ ವೈಜ್ಞಾನಿಕ ಹೆಸರು. ಇಂಗ್ಲಿಷ್‌ನಲ್ಲಿ 'ವೈಟ್ ಫ್ಲಾಗ್' ಎನ್ನಲಾಗುತ್ತದೆ. ಇದಕ್ಕೆ ಶ್ರೀ ಫಲ, ರಾಜ ತರಿ, ಶ್ರೀಪತ್ರಿ, ಎಂದೆಲ್ಲ ಬೇರೆ ಬೇರೆ ಹೆಸರುಗಳಿವೆ. ಇದು ಬಹು ಉಪಯೋಗಿ ಮತ್ತು ಆಯುರ್ವೇದ ಔಷಧಿಗಳಲ್ಲಿ ಬಹು ಬಳಕೆಯ ಸಸ್ಯ ನಮ್ಮ ಮಲೆನಾಡಲ್ಲಿ ಹಾಲು ಕೊಡುವ ಹಸುಗಳಲ್ಲಿ ಹಾಲಿನ ಪ್ರಮಾಣ ಕಡಿಮೆ ಇದ್ದರೆ ಈ ಬೆಳ್ಳಟ್ಟೆ ಸೊಪ್ಪನ್ನು ಹಾಕಿ ಗಂಜಿ ಮಾಡಿ ಹಸುವಿಗೆ ಕೊಡುತ್ತಾರೆ,. ಇದರಿಂದ ಹಸುಗಳಲ್ಲಿ ಹಾಲು ಉತ್ಪಾದಿಸುವ ಪ್ರಮಾಣ ಜಾಸ್ತಿಯಾಗುತ್ತದೆ. ಇನ್ನು ಹಳ್ಳಿಗಳಲ್ಲಿ ಕೂದಲಿಗೆ ಶಾಂಪು ಬಳಕೆಯ ಪರಿಚಯವೇ ಇಲ್ಲದಿರುವ ಕಾಲದಲ್ಲಿ ಈ ಬೆಳ್ಳಟ್ಟೆಸೊಪ್ಪು ಶಾಂಪು ಆಗಿ ಬಳಕೆಯಾಗುತ್ತಿತ್ತು. ಈಗಲೂ ರಾಸಾಯನಿಕಗಳನ್ನು ಬಳಸದ ಕೆಲವರು ಈ ಸೊಪ್ಪನ್ನೇ ಬಳಸುತ್ತಾರೆ. ಜಾಂಡಿಸ್(ಕಾಮಾಲೆ)ನಂತಹ ರೋಗಗಳಿಗೆ ಇದರ ಬೇರನ್ನು ಬಳಸಿ ಔಷಧಿ ತಯಾರಿಸುತ್ತಿದ್ದರು. ಈಗ ಇದನ್ನು ಆಲಂಕಾರಿಕ ಸಸ್ಯವಾಗಿಯೂ ಬೆಳೆಸುತ್ತಾರೆ.

—ಜಯಂತಿ ರಾಘವೇಂದ್ರ, ಆಗುಂಬೆ





# 'ಶಂಭು'ಗೆ ಕಡುಶರ್ಕರ ಪಾಕ ಲೇಪನ

ಸಾಗರದ ಮಂಕಳಲೆ ಗ್ರಾಮದಲ್ಲಿ ಪುನರ್ ನಿರ್ಮಾಣಗೊಂಡ ಶಿಲಾಮಯ ದೇವಸ್ಥಾನದಲ್ಲಿರುವ ಶಂಭುಲಿಂಗೇಶ್ವರ ಲಿಂಗಕ್ಕೆ ಅತಿ ಅಪರೂಪ ಮತ್ತು ಅತಿ ವಿಶಿಷ್ಟವಾದ ಕಡುಶರ್ಕರ ಪಾಕ ಲೇಪನ ಮಾಡಲಾಗಿದೆ. ಈ ದೇವಾಲಯಕ್ಕೆ ಸುಮಾರು ಸಾವಿರ ವರ್ಷಕ್ಕೂ ಹಳೆಯ ಇತಿಹಾಸವಿದ್ದು, ಇಲ್ಲಿರುವ ಮೂಲ ಲಿಂಗವು ಕೆಲ ದಶಕಗಳ ಹಿಂದೆ ಭಗ್ನಗೊಂಡಾಗ, ಅದನ್ನು ಊರಿನ ಕೆರೆಯಲ್ಲಿ ಮುಳುಗಿಸಲಾಗಿತ್ತು. ದೇವಾಲಯದ ಪುನರ್ ನಿರ್ಮಾಣ ಕಾರ್ಯ ಕೈಗೊಳ್ಳುವ ಮುಂಚೆ ಅಷ್ಟಮಂಗಲ ಪ್ರಶ್ನೆಯಲ್ಲಿ ಮೂಲ ಲಿಂಗವನ್ನೇ ಸ್ಥಾಪಿಸಬೇಕು ಎಂಬ ಉತ್ತರ ಸಿಕ್ಕಾಗ ಭಗ್ನಗೊಂಡ ಲಿಂಗ ಸ್ಥಾಪನೆ ಹೇಗೆ ಎಂಬ ಪ್ರಶ್ನೆ ಭಕ್ತರಲ್ಲಿ ತಲೆದೂರಿತು.

ಆಗ ಆಡಳಿತ ಮಂಡಳಿ ಮೊರೆಹೋಗಿದ್ದು ಅತಿ ಕ್ಲಿಷ್ಟಕರ ಮತ್ತು ಅಪರೂಪದ ಕಡುಶರ್ಕರ ಪಾಕದ ಲೇಪನಕ್ಕೆ. ಈ ವಿಧಾನದಲ್ಲಿ ತಯಾರಾದ ಮೂರ್ತಿಗಳು ಅತಿ ವಿರಳ, ಅದರಲ್ಲೂ ಭಗ್ನಗೊಂಡ ಲಿಂಗಕ್ಕೆ ಲೇಪನ ಮಾಡಿದ್ದು ಇನ್ನೂ ವಿರಳ. ಕೇರಳದಿಂದ ತಜ್ಞರನ್ನು ಮತ್ತು ಶಾಸ್ತ್ರಜ್ಞರನ್ನು ಕರೆತಂದು ಭಗ್ನಗೊಂಡ ಲಿಂಗಕ್ಕೆ ಲೇಪನ ಕಾರ್ಯ ಪ್ರಾರಂಭಿಸಿದರು. ಸಕ್ಕರೆಯೇ ಮೂಲ ಧಾತುವಾದ ಈ ಲೇಪನದಲ್ಲಿ, ಹಲವಾರು ರೀತಿಯ ಗಿಡಮೂಲಿಕೆ ಮತ್ತು ಮಂಗಳ ದ್ರವ್ಯಗಳನ್ನು ಸೇರಿಸಿ ತಯಾರಿಸಿದ ಪಾಕದಿಂದ ಬಂಧಲೇಪನ ಮಾಡಿ ಲಿಂಗಕ್ಕೆ ಮೂಲರೂಪ ಬರುವಂತೆ ಮಾಡಿ ಅದೇ ಲಿಂಗವನ್ನು ಸ್ಥಾಪಿಸಲಾಗಿದೆ.

—ಅಂಜನ್ ಕಾಯ್ಕಿಣಿ

